ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿ
ಲೋಇ. ನಂ.2. ಉತ್ತರ ಉಪವಿಭಾಗ,ಬೆಂಗಳೂರು
ಲೋ.ಇ, ಅನೆಕ್ಸ್ ಕಟ್ಟಡ 5ನೇ ಮಹಡಿ
ಕೆ.ಆರ್.ವೃತ್ತ ಬೆಂಗಳೂರು-01

(ಲೋಕೋಪಯೋಗಿ ಇಲಾಖೆ)

ದೂರವಾಣಿ: 080-22114582
ಇ ಮೇಲ್: nsdpwd@gmail.com

ಸಂಖ್ಯೆ: ಸಕಾಅ:ಲೋಇ:ನಂ.2:ಉಉವಿ:ಬೆಂ:ಎಇ:2025-26 — 38 ದಿನಾಂಕ: 23-05-2025

ಇವರಿಗೆ:

The Administrator,
Sri Sharada Vidyaniketana
English High School,
Nandagokula Layout,
Thanisandra Main Road,
Nagavara, Bangalore – 560045.

ಮಾನ್ಯರೇ,

ವಿಷಯ: Sri Sharada Vidyaniketana English High School ಕಟ್ಟಡದ ಸುರಕ್ಷತಾ ಪ್ರಮಾಣ ಪತ್ರವನ್ನು ನೀಡುವ ಬಗ್ಗೆ.

ಉಲ್ಲೇಖ: 1) Sri Sharada Vidyaniketana English High School ರವರ ಪತ್ರ ದಿನಾಂಕ:10.05.2025
2) ಸರ್ಕಾರದ ಆದೇಶ ಸಂಖ್ಯೆ: ಲೋ.ಇ/59/ಬಿ.ಇ.ಡಿ/2019/ದಿನಾಂಕ: 06-05-2022.

* * * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, Sri Sharada Vidyaniketana English High School, Nandagokula Layout, Thanisandra Main Road, Nagavara, Bangalore – 560045 ಶಾಲಾ ಕಟ್ಟಡದ ಸುರಕ್ಷತಾ ಪ್ರಮಾಣ ಪತ್ರವನ್ನು ಶೈಕ್ಷಣಿಕ ಉದ್ದೇಶಕ್ಕಾಗಿ ಒದಗಿಸಲು ಅಗತ್ಯವಿರುವುದಾಗಿ ತಿಳಿಸಿ ಕಟ್ಟಡದ ಸುರಕ್ಷತಾ ಪ್ರಮಾಣ ಪತ್ರ ನೀಡಲು ಉಲ್ಲೇಖ (1)ರ ತಮ್ಮ ಪತ್ರದಲ್ಲಿ ಕೋರಲಾಗಿರುತ್ತದೆ. ಹಾಗೂ ಸದರಿ ಕಟ್ಟಡಕ್ಕೆ ಸಂಬಂಧಿಸಿದ ದಾಖಲೆಗಳನ್ನು ಈ ಕಛೇರಿಗೆ ಸಲ್ಲಿಸಲಾಗಿರುತ್ತದೆ.

ಅದರಂತೆ, ಶಾಲಾ ಕಟ್ಟಡವನ್ನು ದಿನಾಂಕ: 21-05-2025 ರಂದು Sri Sharada Vidyaniketana English High School, ಮುಖ್ಯಸ್ಥರ ಉಪಸ್ಥಿತಿಯಲ್ಲಿ ಪರಿವೀಕ್ಷಿಸಲಾಗಿರುತ್ತದೆ. ಹಾಗೂ ಉಲ್ಲೇಖ (2)ರ ಸರ್ಕಾರದ ಆದೇಶದನ್ವಯ ನಗರ ಪ್ರದೇಶದಲ್ಲಿನ ಶಾಲೆಯ ಸುರಕ್ಷತಾ ಪ್ರಮಾಣ ಪತ್ರವನ್ನು ನೀಡಲು The Assistant Executive Engineer, PWD. No 2 North Sub-division, K.R Cirle, Bangalore ರವರ ಹೆಸರಿನಲ್ಲಿ ರೂ. 5000/- ಮೊತ್ತವನ್ನು ಖಜಾನೆ-2 ಮುಖಾಂತರ ಚಲನ್ ಸಂಖ್ಯೆ: CR0525005900375667 ರಲ್ಲಿ ಈ ಕಛೇರಿಗೆ ಸಲ್ಲಿಸಿರುತ್ತೀರಿ.

ಸದರಿ ಕಟ್ಟಡವನ್ನು Sri Sharada Vidyaniketana English High School, Nandagokula Layout, Thanisandra Main Road, Nagavara, Bangalore – 560045 ಜಾಗದಲ್ಲಿ ನಿರ್ಮಿಸಿರುವುದು ಕಂಡು ಬಂದಿರುತ್ತದೆ. ಕಟ್ಟಡಗಳ ಸುರಕ್ಷತೆಗೆ ಸಂಬಂಧಿಸಿದಂತೆ ಕಟ್ಟಡದ ಕಾಂಕ್ರಿಟ್ ಸದೃಢತೆಯ ಬಗ್ಗೆ Dr. Manjesh. L, ME (Civil Engg) ph.D. MISTE., MIRC Professor, Department of Civil Engineering UVCE Bangalore University, Jnanabharathi Campus, Bangalore- 560 056, ರವರು Rebound hammer test & Ultra Sonic test ಕೈಗೊಂಡು ವರದಿಯನ್ನು ನೀಡಿರುತ್ತಾರೆ.

ಸದರಿ ಸಂಸ್ಥೆಯವರು ನೀಡಿರುವ ಎಲ್ಲಾ ದಾಖಲೆಗಳನ್ನು ಪರಿಶೀಲಿಸಲಾಗಿ ಹಾಗೂ Dr. Manjesh. L, Professor, Bangalore University, UVCE, Bangalore ರವರು ಕಟ್ಟಡವು ರಚನಾತ್ಮಕವಾಗಿ ಸುರಕ್ಷಿತವಾಗಿದೆಯೆಂದು ಪ್ರಮಾಣ ಪತ್ರವನ್ನು ನೀಡಿರುತ್ತಾರೆ. ಸದರಿ ವರದಿಗಳನ್ನು ಹಾಗೂ ಕಟ್ಟಡವನ್ನು ಪರಿಶೀಲಿಸಲಾಗಿ ಕಟ್ಟಡದ ಆರ್.ಸಿ.ಸಿ. ಕಂಬ, ತೊಲೆ ಹಾಗೂ ಛಾವಣಿಯಲ್ಲಿ ಯಾವುದೇ ಬಿರುಕುಗಳು ಕಂಡು ಬಂದಿರುವುದಿಲ್ಲ ಹಾಗೂ ಕಟ್ಟಡವು ಮೇಲ್ನೋಟಕ್ಕೆ ಸುರಕ್ಷಿತವಾಗಿರುವುದು ಕಂಡು ಬಂದಿರುತ್ತದೆ. ಹಾಗೂ ಕಟ್ಟಡವು Structural Sound Condition ಇರುವುದಾಗಿ ಪರೀಕ್ಷೆ ವರದಿಗಳು ಕಂಡು ಬಂದಿರುವುದರಿಂದ ಹಾಗೂ ಕಟ್ಟಡವು ಮೇಲ್ನೋಟಕ್ಕೆ ಸುರಕ್ಷಿತವಾಗಿರುವುದು ಕಂಡು ಬಂದಿರುತ್ತದೆ. ಈ ಕೆಳಕಂಡ ಷರತ್ತುಗಳನ್ನು ಅನುಸರಿಸಲು ಸೂಚಿಸಲಾಗಿದೆ.

1. ಅಗ್ನಿಶಾಮಕ ಇಲಾಖೆ ಮತ್ತು ಇತರೆ ಸಂಬಂಧಪಟ್ಟ ಇಲಾಖೆಗಳ ಸಕ್ಷಮ ಪ್ರಾಧಿಕಾರಗಳಿಂದ ಅನುಮತಿ / ಪ್ರಮಾಣ ಪತ್ರವನ್ನು ನಿಯಮಾವಳಿಗಳ ಅನ್ವಯ ನಿಗದಿತ ಸಮಯಗಳಲ್ಲಿ ಪಡೆಯತಕ್ಕದ್ದು.
2. ಕಟ್ಟಡವನ್ನು ಕಾಲಕಾಲಕ್ಕೆ ಉತ್ತಮ ಗುಣಮಟ್ಟದ ಸಾಮಗ್ರಿಗಳನ್ನು ಬಳಸಿ ತಜ್ಞರಿಂದ ವ್ಯವಸ್ಥಿತವಾಗಿ ನಿರ್ವಹಣೆ ಮಾಡತಕ್ಕದ್ದು.
3. ವಿದ್ಯಾರ್ಥಿಗಳ ಹಾಗೂ ಶಿಕ್ಷಕರ ಸುರಕ್ಷತೆಗೆ ಸಕಲ ಆದ್ಯತೆಯನ್ನು ನೀಡಿ ಸೂಕ್ತ ಸುರಕ್ಷತಾ ವ್ಯವಸ್ಥೆಯನ್ನು ಅಳವಡಿಸಿಕೊಳ್ಳತಕ್ಕದ್ದು.
4. ಕಟ್ಟಡದ ಸದೃಢತೆಗೆ ಧಕ್ಕೆಯಾಗುವಂತಹ ಯಾವುದೇ ಇತರೆ ಕಾಮಗಾರಿಗಳನ್ನು ಸಕ್ಷಮ ಪ್ರಾಧಿಕಾರದಿಂದ ಅನುಮತಿ ಪಡೆಯದೇ ಕೈಗೊಳ್ಳತಕ್ಕದ್ದಲ್ಲ. ಅನುಮತಿ ಪಡೆಯದೇ ಕೈಗೊಂಡಲ್ಲಿ ಪ್ರಮಾಣ ಪತ್ರವು ಆ ಕೂಡಲೇ ರದ್ದಾಗುತ್ತದೆ.
5. ಕುಡಿಯುವ ನೀರು ಹಾಗೂ ಶೌಚಾಲಯಗಳಲ್ಲಿ ಸದಾ ಸ್ವಚ್ಚತೆಯನ್ನು ಕಾಪಾಡಿಕೊಳ್ಳತಕ್ಕದ್ದು ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಿಂದ ಶಾಲಾ ಕಾಲೇಜಿಗೆ ಸಂಬಂಧಿಸಿದ ಎಲ್ಲಾ ನಿರ್ದೇಶನ ಹಾಗೂ ನಿಯಮಾವಳಿಯನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.

ಮೇಲೆ ತಿಳಿಸಲಾಗಿರುವ ಷರತ್ತುಗಳಿಗೊಳಪಟ್ಟು Sri Sharada Vidyaniketana English High School, Nandagokula Layout, Thanisandra Main Road, Nagavara, Bangalore – 560045 ಕಟ್ಟಡಕ್ಕೆ ಸುರಕ್ಷತಾ ಪ್ರಮಾಣ ಪತ್ರವನ್ನು 2025-2026 ನೇ ಶೈಕ್ಷಣಿಕ ಸಾಲಿನಲ್ಲಿ ನೀಡಲಾಗಿದೆ.

ತಮ್ಮ ವಿಶ್ವಾಸಿ,

ಸಹಾಯಕ ಕಾರ್ಯಪಾಲಕ ಅಭಿಯಂತರರು
ಲೋಇ., ನಂ.2, ಉತ್ತರ ಉಪವಿಭಾಗ, ಬೆಂಗಳೂರು.